ಬಿಸಿಲು ಬೆಳದಿಂಗಳು - 202 / ವಿಜಯ ಕರ್ನಾಟಕ 26.1.2012)



ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಧರ್ಮಗ್ರಂಥ ಮತ್ತು ಸಂವಿಧಾನ

ಜಗತ್ತಿನಲ್ಲಿ ಅನೇಕ ಧರ್ಮಗಳಿವೆ. ಅವುಗಳಲ್ಲಿ ಪ್ರತಿಯೊಂದಕ್ಕೂ ತನ್ನದೇ ಆದ ಧರ್ಮಗ್ರಂಥವಿದೆ, ಧಾರ್ಮಿಕ ಸಾಹಿತ್ಯವಿದೆ. ಆಯಾಯ ಧರ್ಮೀಯರು ಅವರವರ ಧರ್ಮಗ್ರಂಥಗಳನ್ನು ಅತ್ಯಂತ ಪೂಜ್ಯ ಭಾವನೆಯಿಂದ ಕಾಣುತ್ತಾರೆ, ಆರಾಧಿಸುತ್ತಾರೆ. ಅವುಗಳ ಬಗೆಗೆ ಅನ್ಯ ಧರ್ಮೀಯರಿಂದ ಅನಾದರದ ಮಾತುಗಳೇನಾದರೂ ಕೇಳಿಬಂದರೆ ಅವರ ಧಾರ್ಮಿಕ ಭಾವನೆಗಳಿಗೆ ಚ್ಯುತಿ ಉಂಟಾಗುವುದರಿಂದ ಅಂತಹ ನಿಂದನೆಯನ್ನು ಸಹಿಸುವುದಿಲ್ಲ. ಇದಕ್ಕೆ ಒಳ್ಳೆಯ ಉದಾಹರಣೆಯೆಂದರೆ ಇತ್ತೀಚೆಗೆ ರಷ್ಯಾದಲ್ಲಿ ಭಗವದ್ಗೀತೆ ಕುರಿತು ನಡೆದ ವಿವಾದ. ಅಲ್ಲಿಯ ನ್ಯಾಯಾಲಯ ಭಗವದ್ಗೀತೆಯನ್ನು ಕುರಿತಂತೆ ಹಿಂದೂಗಳ ಭಾವನೆಗಳಿಗೆ ಧಕ್ಕೆ ಆಗದ ರೀತಿಯಲ್ಲಿ ತೀರ್ಪನ್ನು ನೀಡಿದೆ. ಇಂಥ ತೀರ್ಮಾನವನ್ನು ನೀಡದೆ ಇದ್ದಿದ್ದರೆ ಪರಂಪರಾಗತವಾಗಿ ಮಿತ್ರ ದೇಶಗಳಾಗಿದ್ದ ಭಾರತ ಮತ್ತು ರಷ್ಯಾಗಳ ಮಧ್ಯೆ ವಿರಸವುಂಟಾಗುತ್ತಿತ್ತು, ಮೈತ್ರಿಗೆ ಧಕ್ಕೆ ಒದಗುತ್ತಿತ್ತು.

ಸಾಮಾನ್ಯವಾಗಿ ಒಂದು ಧರ್ಮದ ಶ್ರದ್ಧಾಳುಗಳು ತಮ್ಮ ಧರ್ಮದಲ್ಲಿ ನಂಬಿಕೆ, ಶ್ರದ್ಧೆ ಇಲ್ಲದವರನ್ನು ಕೀಳಾಗಿ ಕಾಣುತ್ತಾರೆ. ಹಿಂದೂಗಳು ಅಂಥವರನ್ನು ನಾಸ್ತಿಕರು ಎಂದರೆ ಕ್ರೈಸ್ತರು ಹೀದನ್ (heathen) ಎನ್ನುತ್ತಾರೆ, ಮುಸ್ಲಿಮರು ಕಾಫಿರ್ ಎನ್ನುತ್ತಾರೆ, ವೀರಶೈವರು ಭವಿ ಎನ್ನುತ್ತಾರೆ. ಗುಡಿಗೋ ಮಸೀದಿಗೋ ಚರ್ಚಿಗೋ ಹೋದರಷ್ಟೇ ಧಾರ್ಮಿಕರೆಂದು ಹೇಳಲಾಗದು. ಈ ಯಾವ ತಾಣಗಳಿಗೆ ಹೋಗದಿದ್ದರೂ ಸನ್ನಡತೆಯುಳ್ಳ, ಸಚ್ಚಾರಿತ್ರ್ಯವುಳ್ಳ ಸಜ್ಜನನೇ



ನಿಜವಾದ ಧಾರ್ಮಿಕ ವ್ಯಕ್ತಿ. ಗುಡಿ-ಚರ್ಚು-ಮಸೀದಿಗಳಿಗೆ ಹೋಗುವುದೇ ಮನುಷ್ಯ ತನ್ನಲ್ಲಿರುವ ಅವಗುಣಗಳನ್ನು ಕಳೆದುಕೊಳ್ಳುವುದಕ್ಕೆ. ಆದರೆ ಎಲ್ಲ ಅವಗುಣಗಳನ್ನು ಒಳಗೆ ತುಂಬಿಟ್ಟುಕೊಂಡು ಕೇವಲ ಹೊರನೋಟಕ್ಕೆ ಧಾರ್ಮಿಕ ಶ್ರದ್ಧಾಳುವೆಂದು ತೋರಿಸಿಕೊಂಡರೆ ಏನು ಪ್ರಯೋಜನ! ಗುಡಿ-ಚರ್ಚು-ಮಸೀದಿಗಳಿಗೆ ಹೋಗಿಯೂ ಆಯಾಯ ಧರ್ಮದ ತತ್ವಗಳನ್ನು ಅಳವಡಿಸಿಕೊಳ್ಳದಿದ್ದರೆ ಅವನೇ ನಾಸ್ತಿಕ, ಹೀದನ್, ಕಾಫಿರ್, ಭವಿ ಎಲ್ಲ! ಅಂತರಂಗ ಶುದ್ಧಿಯಿಲ್ಲದವನ ಶುಷ್ಕ ಧಾರ್ಮಿಕ ಆಚರಣೆ ಮತ್ತು ಪೂಜೆ ಬಸವಣ್ಣನವರು ಹೇಳುವ ಹಾಗೆ 'ಹೆಂಡದ ಮಡಕೆಯ ಹೊರಗೆ ತೊಳೆದಂತೆ', ಹಾವನ್ನು ಹರಿದಾಡಲು ಬಿಟ್ಟು ಹುತ್ತವ ಬಡಿದಂತೆ ನಿರರ್ಥಕ. ತಮ್ಮ ಧರ್ಮಗ್ರಂಥಗಳು ಬೋಧಿಸುವ ಉಪದೇಶದಂತೆ ಆಯಾಯ ಧರ್ಮೀಯರು ನಡೆಯದಿದ್ದರೆ ಅದು ಆ ಧರ್ಮಗ್ರಂಥದ ಮೇಲೆ ಸ್ವಧರ್ಮೀಯರಿಂದಲೇ ಆಗುವ ಅಪಚಾರ ಮತ್ತು ದ್ರೋಹ.

ಇಂದು ಗಣರಾಜ್ಯೋತ್ಸವ. ಭಾರತ ಸ್ವತಂತ್ರಗೊಂಡ ಮೇಲೆ ದೇಶದ ಆಡಳಿತ ನಿರ್ವಹಣೆಗೆ ನಿರ್ದಿಷ್ಟ ರೂಪುರೇಷೆಗಳನ್ನು ನೀಡುವ ಸಂವಿಧಾನ ಜನ್ಮವೆತ್ತಿದ ದಿನ. ಪ್ರತಿಯೊಂದು ಧರ್ಮಕ್ಕೂ ಒಂದು ಧರ್ಮಗ್ರಂಥ ಹೇಗೋ ಹಾಗೆ ಪ್ರತಿಯೊಂದು ದೇಶಕ್ಕೂ ತನ್ನದೇ ಆದ ಸಂವಿಧಾನವಿರುತ್ತದೆ. ಅದನ್ನು ಬೇಕಾದರೆ 'ರಾಜಧರ್ಮಗ್ರಂಥ' ಎನ್ನಬಹುದು. ದೇಶದಲ್ಲಿ ಒಂದೇ ಧರ್ಮದವರು, ಒಂದೇ ಪಂಗಡದವರು ಇರುವುದು ಸಾಧ್ಯವಿಲ್ಲ. ವಿಭಿನ್ನ ಧರ್ಮೀಯರಲ್ಲಿ ಏಕತೆ ಸಾಧ್ಯವಾಗುವುದು ಸಂವಿಧಾನದಿಂದ. ಯಾವುದೇ ಧರ್ಮಕ್ಕೆ ಸೇರಿದ್ದರೂ ಆಯಾ ದೇಶವಾಸಿಗಳು ತಂತಮ್ಮ ದೇಶದ ಸಂವಿಧಾನವನ್ನು ಗೌರವಿಸಬೇಕಾದುದು ಪರಮ ಕರ್ತವ್ಯ. ದೇಶದ ಸಂವಿಧಾನಕ್ಕೆ ಅವಮಾನವಾಗುವುದನ್ನು ಯಾವುದೇ ಧರ್ಮಕ್ಕೆ ಸೇರಿದವರಾಗಿದ್ದರೂ ಸಹ ಸಹಿಸಬಾರದು. ಧರ್ಮದ ಶ್ರದ್ಧಾಳುವಾಗಿ ತನ್ನ ಧರ್ಮಗ್ರಂಥಕ್ಕೆ ಗೌರವವನ್ನು ಸಲ್ಲಿಸುವಂತೆ ದೇಶದ ನಾಗರಿಕನಾಗಿ ತನ್ನ ದೇಶದ ಸಂವಿಧಾನಕ್ಕೆ ಗೌರವವನ್ನು ಸಲ್ಲಿಸಬೇಕು.

ದುರದೃಷ್ಟವಶಾತ್ ಧರ್ಮಗ್ರಂಥಗಳ ಉಪದೇಶಗಳಿಗೆ ಅನುಗುಣವಾಗಿ ಹೇಗೆ ಜನರು ನಡೆಯುತ್ತಿಲ್ಲವೋ ಹಾಗೆ ನಾಗರಿಕರು ದೇಶದ ಸಂವಿಧಾನದ ಆಶಯಕ್ಕೆ ಅನುಗುಣವಾಗಿ ನಡೆಯುತ್ತಿಲ್ಲ. ಜನರಷ್ಟೇ ಏಕೆ ಸರಕಾರಗಳೂ ಸಹ ಸಂವಿಧಾನದ ಆಶಯದಂತೆ ನಡೆಯುತ್ತಿಲ್ಲ. ಉದಾಹರಣೆಗೆ ಸಂವಿಧಾನವು ಉಪದೇಶಿಸುವ ನಿರ್ದೇಶಕ ತತ್ವಗಳಲ್ಲಿ (Directive Principles of State) ಪಾನನಿಷೇಧವೂ ಒಂದು:

> "The State shall regard the raising of the level of nutrition and standard of living of its people and the improvement of public health as among its primary duties and in particular the State shall endeavour to bring about prohibition of the consumption of intoxicating drinks and of drugs which are injurious to health."

ಮದ್ಯಪಾನ ನಿಷೇಧವನ್ನು ಜಾರಿಗೆ ತರಬೇಕೆನ್ನುವ ಈ ನಿರ್ದೇಶಕ ತತ್ವ ರಾಜಕೀಯ ಧರ್ಮೋಪದೇಶವಾಗಿದೆ; ಯಾವ ಸರಕಾರವೂ ಪಾಲಿಸದ ನೀತಿಪಾಠವಾಗಿದೆ. ಇದನ್ನು ಜಾರಿಗೊಳಿಸಬೇಕೆನ್ನುವ ಇರಾದೆ ಸರಕಾರಕ್ಕೆ ತಿಲಮಾತ್ರವೂ

ಇಲ್ಲ. 90ರ ದಶಕದಲ್ಲಿ ನಾವು ಕೈಗೊಂಡಿದ್ದ ಮದ್ಯಪಾನ ನಿಷೇಧ ಆಂದೋಲನವನ್ನು ಬೆಂಬಲಿಸಿ ರಾಷ್ಟ್ರನಾಯಕ ಎಸ್. ನಿಜಲಿಂಗಪ್ಪನವರು ನಮಗೆ ಬರೆದ ಈ ಮುಂದಿನ ಪತ್ರ ಇಲ್ಲಿ ಉಲ್ಲೇಖನೀಯ:

- **ಮನುಷ್ಯನನ್ನು ಮೃಗವನ್ನಾಗಿ ಪರಿವರ್ತಿಸತಕ್ಕ ಕೆಟ್ಟ ಚಾಳಿಗಳಲ್ಲಿ ಮದ್ಯಪಾನವೂ ಒಂದು. ಇದನ್ನು ಎಲ್ಲರೂ ಒಪ್ಪುತ್ತಾರೆ. ಮದ್ಯಪಾನಕ್ಕೆ ತುತ್ತಾದವರೂ ಸರಿಯಿದ್ದಾಗ ಒಪ್ಪುತ್ತಾರೆ. ಇದನ್ನು ವಿರೋಧಿಸಿ ಇಲ್ಲದಂತೆ ಮಾಡಲು ನಮಗೆ ಸ್ವಾತಂತ್ರ್ಯ ಬರುವುದಕ್ಕೆ ಮುಂಚೆಯಿಂದಲೂ ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರು ಪ್ರಯತ್ನಪಟ್ಟರು, ಕೊನೆಯುಸಿರಿನವರೆಗೂ ಪ್ರಚಾರ ನಡೆಸಿದರು. ರಾಜ್ಯಾಂಗದಲ್ಲಿಯೂ ಪಾನನಿಷೇಧಕ್ಕೆ ಒತ್ತು ಕೊಡಲಾಗಿದೆ. ಆದರೆ ಅದನ್ನು ಕಾರ್ಯಗತಮಾಡಲು ಯಶಸ್ವಿ ಆಗದೇ ಇರುವುದು ಅತ್ಯಂತ ವಿಷಾದದ ಸಂಗತಿ.**
- **ತಪ್ಪು ರೀತಿಯಿಂದ ಮದ್ಯಗಳನ್ನು ತಯಾರಿಸಿ, ಕಾನೂನಿದ್ದರೂ ವಿರೋಧವಾಗಿ ಕೆಟ್ಟ ರೀತಿಯಲ್ಲಿ ತಯಾರಿಸಿ ಅಂತಹದನ್ನು ಕುಡಿದು ಪ್ರಾಣಕ್ಕೂ ಅಪಾಯ ತಂದುಕೊಳ್ಳುತ್ತಾರೆ ಎಂಬ ಭಯವೂ ಇದೆ. ಆದರೆ ಅದನ್ನೇ ಮುಂದುಮಾಡಿ ಸರಕಾರವೇ ಅದನ್ನು ತಯಾರು ಮಾಡುವುದು ತಪ್ಪು.**
- **ಇದಕ್ಕಿಂತಲೂ ಸರಕಾರಕ್ಕೆ ದೊಡ್ಡ ಕಾರಣ ಹಣ ಸಂಪಾದನೆ. ಅದನ್ನು ಬಿಟ್ಟುಕೊಡುವ ಮನಸ್ಸು ಸರಕಾರಕ್ಕೆ ಬರುವುದು ಕಷ್ಟ. ಬರೀ ಅಬಕಾರಿ ಇಲಾಖೆಯಿಂದ ಬರುವ ಆದಾಯ ಒಂದಾದರೆ ಭ್ರಷ್ಟರಾಗಿರುವ ಮಂತ್ರಿಗಳಿಗೆ, ಅಧಿಕಾರಿಗಳಿಗೆ, ಅದಕ್ಕಿಂತ ಎಷ್ಟೋಪಟ್ಟು ನೀತಿಬಾಹಿರ, ಧರ್ಮಬಾಹಿರ ಆದಾಯಗಳು ಸಾಕಷ್ಟಿವೆ. ಸರಕಾರದಲ್ಲಿ ಭ್ರಷ್ಟಾಚಾರಕ್ಕೆ ಇದು ಒಂದು ಮುಖ್ಯ ದ್ವಾರ.**

ದೈನಂದಿನ ವ್ಯವಹಾರಗಳಲ್ಲಿ ‘ಹಾವು ಹೊಡೆದು ಹದ್ದಿಗೆ ಹಾಕಿದಂತಾಯಿತು’ ಎಂದು ಅಸಮಾಧಾನದಿಂದ ಮಾತನಾಡುವುದುಂಟು. ಹಾವನ್ನು ಹೊಡೆದ ಮೇಲೆ ಹದ್ದಿಗೆ ಹಾಕಿದರೇನು, ಹುಲಿಗೆ ಹಾಕಿದರೇನು? ಎಂದು ಕೇಳಬಹುದು. ಆದರೆ ಇದರ ನಿಜವಾದ ಅರ್ಥ ಅದಲ್ಲ. ಸಾಯಿಸಿದ ಹಾವನ್ನು ಹದ್ದಿಗೆ ಹಾಕುವುದು ಎಂದು ಈ ಮಾತಿನ ತಾತ್ಪರ್ಯವಲ್ಲ. ಕಚ್ಚುವ ಹಾವನ್ನು ಹೊಡೆದು ಏನನ್ನು/ಯಾರನ್ನು ರಕ್ಷಣೆ ಮಾಡಿರುತ್ತೀರೋ ಅದನ್ನು/ಅವರನ್ನು ಹಾವಿನಿಂದ ರಕ್ಷಣೆ ಮಾಡಿದ ಬಳಿಕ ಜೋಪಾನ ಮಾಡುವ ಬದಲು ಹದ್ದಿಗೆ ಹಾಕಿ ಸಾಯುವಂತೆ ಮಾಡಿದರೆ ಹಾವನ್ನು ಹೊಡೆದದ್ದು ನಿಷ್ಪ್ರಯೋಜಕ ಕ್ರಿಯೆ ಎನಿಸುತ್ತದೆ ಎಂಬುದು ಇದರ ಆಶಯ. ಭಾರತದ ಸ್ವಾತಂತ್ರ್ಯಹೋರಾಟದ ಸ್ಥಿತಿ ಈ ತೆರನಾಗಿದೆ. ಮಹಾತ್ಮಾ ಗಾಂಧೀಜಿಯವರ ನೇತೃತ್ವದಲ್ಲಿ ಸ್ವಾತಂತ್ರ್ಯಹೋರಾಟ ನಡೆದು ಭಾರತವನ್ನು ಬ್ರಿಟಿಷರ ದಾಸ್ಯದಿಂದ ಪಾರುಮಾಡಲಾಯಿತು. ಅದು ಹಾವು ಹೊಡೆದಂತೆ. ಅನೇಕರ ತ್ಯಾಗ, ಬಲಿದಾನಗಳಿಂದ ಸ್ವತಂತ್ರಗೊಂಡ ಭಾರತವನ್ನು ಈಗ ಭ್ರಷ್ಟರಾಜಕಾರಣಿಗಳೆಂಬ ಹದ್ದುಗಳಿಗೆ ಹಾಕಿದಂತಾಗಿದೆ! ‘ಬೆಂಕಿಯಿಂದ ಬಾಣಲೆಗೆ’ ಎಂಬ ನಾಣ್ಣುಡಿಯಂತೆ ಅಂದು ಪರಕೀಯರ ದಾಸ್ಯದಿಂದ ಪಾರಾದ ಭಾರತೀಯ ಸಮಾಜವು ಇಂದು ರಾಜಕೀಯ ರಣಹದ್ದುಗಳ ಕೈಗೆ ಸಿಕ್ಕು ಮದ್ಯದ ದಾಸ್ಯಕ್ಕೆ ಒಳಗಾಗಿದೆ. ದಿನೇ ದಿನೇ ಮದ್ಯಪಾನದ ಪಿಡುಗು ವ್ಯಾಪಕವಾಗಿ ಹರಡಿ ವ್ಯಕ್ತಿ, ಕುಟುಂಬ, ಸಮಾಜ ಮತ್ತು ದೇಶವನ್ನು ದುಃಸ್ಥಿತಿಗೆ ಈಡುಮಾಡಿದೆ. ಇದಕ್ಕೆ ಪರಿಹಾರವಿಲ್ಲವೇ? ಯಾರನ್ನೇ ಕೇಳಲಿ ‘ಇದನ್ನು ನಿಲ್ಲಿಸಲು ಎಲ್ಲಿಯಾದರೂ ಸಾಧ್ಯವೇ!’ ಎಂಬ ನಿರಾಶಾದಾಯಕ ಮಾತೇ ಕೇಳಿಬರುತ್ತಿದೆ. ಸ್ವಾತಂತ್ರ್ಯಹೋರಾಟಗಾರರಲ್ಲಿ ಇಂತಹ ಅಂಜುಕುಳಿತನ ಮತ್ತು ಹೇಡಿತನಗಳಿದ್ದಿದ್ದರೆ ಈ ದೇಶಕ್ಕೆ ಎಂದೂ ಸ್ವಾತಂತ್ರ್ಯ ಸಿಕ್ಕುತ್ತಿರಲಿಲ್ಲ. ಅಂದು ಗಾಂಧೀಜಿಯವರು ಸಾಮಾಜಿಕ ಮತ್ತು ರಾಜಕೀಯ ಜಾಗೃತಿಗಾಗಿ ಹೋರಾಟ ಮಾಡಿದಂತೆ ಇಂದು ಜನರ ನೈತಿಕ ಜಾಗೃತಿಗಾಗಿ ಹೋರಾಟ ನಡೆಯಬೇಕಾಗಿದೆ. ಜನರು ಮತ್ತು ಸರಕಾರ ಸಂವಿಧಾನದ ಆಶಯವನ್ನು ಅರ್ಥಮಾಡಿಕೊಂಡು ಅದರಂತೆ ನಡೆಯಲು ದೀಕ್ಷಾಬದ್ಧರಾಗಬೇಕಾಗಿದೆ.

**26.1.2012**

**ಶ್ರೀ ತರಳಬಾಳು ಜಗದ್ಗುರು**
**ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**